ಮುಂಚೆ ಆ ಖಾಲಿತನ ತನ್ನ ಗಮನಕ್ಕೆ ಬಂದಿರಲಿಲ್ಲವೇ?

ಕ್ಷಣ ತಲೆ ಕೆರದುಕೊಂಡು, ಆ ನಿಶ್ಯಬ್ದಕ್ಕೇ ಕಿವಿಯಾಗುತ್ತಾ ನಿಂತ. ನಿಶ್ಯಬ್ದವನ್ನೇ ಆಲಿಸುತ್ತಿದ್ದರೆ ಕ್ರಮೇಣ ಒಳಗಿನ ಮೌನವೇ ಕೇಳಿಸಿಕೊಳ್ಳುತ್ತಾ ಮೆಲ್ಲಗೆ ಪ್ರಶಾಂತ ಮನಃಸ್ಥಿತಿಯೊಂದು ಆವರಿಸಿಕೊಳ್ಳುತ್ತದೆಯೆಂದು ಎಲ್ಲೋ ಓದಿದ್ದು ನೆನಪಾಯಿತು. ಆದರೆ ಬಾಗಿಲ ಪಕ್ಕದ ಕಿಟಕಿ ಗಾಜಿನಾಚೆ ಮಸುಕಾಗಿ ಕಾಣಿಸುತ್ತಿದ್ದ ಗಿಡಮರಗಳೆಲ್ಲಾ ಪ್ರೇತಗಳಂತೆ ಎದ್ದೆದ್ದು ಬಿದ್ದು, ಬಾಗಿ ಬಳುಕಿ, ಎಪರಾ ತಪರಾ ತಲೆ ಚಚ್ಚಿಕೊಳ್ಳುತ್ತಾ ಗಲಾಟೆಯೆಬ್ಬಿಸಿ, ಅಲ್ಲೋಲ ಕಲ್ಲೋಲಗೊಂಡ ಜಗತ್ತೊಂದನ್ನು ಅವನ ಮುಂದೆ ರೂಪಿಸುತ್ತಿತ್ತು. ಭಯಂಕರವಾಗಿ ನರ್ತಿಸುತ್ತಿರುವ ಗಿಡಮರಗಳ ಭರ್ಜರಿ ತಾಂಡವ ನೃತ್ಯದ ಅಟ್ಟಹಾಸವನ್ನು ಪುರು ಒಂದಷ್ಟು ಹೊತ್ತು ನಿಟ್ಟಿಸುತ್ತಾ ನಿಂತ. ನಿಜಕ್ಕೂ ಮಳೆ ಅಷ್ಟು ಜೋರಾಗಿ ಬರುತ್ತಿದೆಯೋ ಅಥವಾ ಇವೂ ನಾಟಕವಾಡುತ್ತಿವೆಯೋ ತಿಳಿಯದೇ ಗಾಜಿಗೆ ಕಣ್ಣೊತ್ತಿ ಆಚೆಯ ಅಬ್ಬರವನ್ನು ಗ್ರಹಿಸಲು ಪ್ರಯತ್ನಿಸಿದ. ರಪ್ಪೆಂದು ರಾಚುತ್ತಿದ್ದ ಮಳೆ ನೀರಿಗೆ ನೆಂದ ಕಿಟಕಿ ಕನ್ನಡಿ ತನ್ನ ಒದ್ದೆ ಅಂತರಂಗದ ಅಸ್ಪಷ್ಟ ಚಿತ್ರ ಹೊರಚೆಲ್ಲಿ ಮಬ್ಬಾಗಿ ನಿಂತಿತ್ತು.

ಭಾನುವಾರ ಮತ್ತು ಭಾನುವಾರದ ಬೆಳಗು. ಬಾತ್‌ರೂಮಿನ ಕನ್ನಡಿಯಲ್ಲಿ ಇಣಿಕಿದ ತನ್ನ ಪ್ರತಿಬಿಂಬದಲ್ಲಿ ಎರಡು ದಿನಗಳ ಕುರುಚಲು ಗಡ್ಡ ಬೆಳೆದಿತ್ತು. ಕೆನ್ನೆಯ ಮೇಲೊಮ್ಮೆ ಪುರು ಕೈಯಾಡಿಸಿಕೊಂಡಾಗ ಮುಖವೆಲ್ಲಾ ತರಿತರಿಯೆನ್ನಿಸಿತು. ನಾಳೆ ಆಫೀಸಿಗೆ ಹೋಗುವ ಮುಂಚೆ ಶೇವ್ ಮಾಡಿಕೊಂಡರಾಯಿತೆಂದು ಉದಾಸೀನದಲ್ಲಿ ಹಾಲ್‌ಗೆ ಬಂದು ಧೊಪ್ಪನೆ ಕುಸಿದು ಕುಳಿತ. ಚಾರ್ಜ್‌ಗೆ ಇಡಲು ಮರೆತ ಮೊಬೈಲ್ ಇನ್ನೇನು ಅಸ್ತಂಗತವಾಗುವುದಕ್ಕೆ ಮುಂಚೆ ಟಂಗ್ ಟಂಗೆಂದು ಮೂರು ಮೆಸೇಜ್ ಹಾಕಿ ಮೌನ ಗೌರಿ ವ್ರತ ಹಿಡಿಯಿತು. ಮೊನ್ನೆ ರಾತ್ರಿಯ ರಂಪಾಟದಲ್ಲಿ ಚಾರ್ಜರ್ ಎಲ್ಲಿಟ್ಟಿದ್ದೇನೆಂದೇ ಅವನಿಗೆ ನೆನಪಾಗಲಿಲ್ಲ. ಹಾಲ್‌ಗೆ ಹೋಗಿ ಟೀವಿ ಹಾಕಿಕೊಂಡು ಕುಳಿತ.

ಇಷ್ಟು ದಿನ ನಾಪತ್ತೆಯಾಗಿದ್ದ ಡೇರಾ ಸಚ್ಚಾ ಸೌಧಾ ಗುರ್ಮೀತ್ ರಾಮ್ ರಹೀಮ್ ಸಿಂಗ್‌ನ ಸಾಕು ಮಗಳು ಕಮ್ ಪ್ರೇಯಸಿ ಹನಿ ಪ್ರೀತ್ ಇನ್ಸಾನ್ ಅವನ ಮನೆಯ ಐವತ್ತು ಇಂಚಿನ ಟೀವಿಯನ್ನು ಅಲಂಕರಿಸಿ ಕುಳಿತಿದ್ದಳು. ಹಲ್ಲಿನ ನಡುವಿನ ಬಿರುಕನ್ನು ಮತ್ತೆ ಮತ್ತೆ ಪ್ರದರ್ಶಿಸುತ್ತಾ ತಾನೆಷ್ಟು ಮುಗ್ಧೆಯೆಂದು ಸಾಬೀತು ಪಡಿಸುತ್ತಿದ್ದಳು. 'ಸಮ್ ಟೈಮ್ಸ್ ಕ್ರಾಕ್ ಇಸ್ ಗುಡ್! ಬಿಕಾಸ್ ಇಟ್ ಲೆಟ್ಸ್ ಗ್ಲಿಂಪ್ಸ್ ಆಫ್ ಲೈಟ್ ಇನ್!' ಎಲ್ಲೋ ಓದಿದ್ದು ನೆನಪಾಗಿ ಮುಖದಲ್ಲೊಂದು ನಿರಾಳದ ಕಿರುನಗೆ ಚಿಮ್ಮಿತು.

ಇಡೀ ದೇಶವೇ ಇಷ್ಟು ದೊಡ್ಡ ಹುಚ್ಚಾಟವನ್ನು ಕಣ್ಣು ಮಿಟುಕಿಸದೆ ನಿರ್ಲಿಪ್ತವಾಗಿ ವೀಕ್ಷಿಸುತ್ತಾ ವೀಕೆಂಡ್ ಪಾರ್ಟಿ ಮಾಡಿ ಜೀರ್ಣಿಸಿಕೊಳ್ಳುತ್ತಿರುವಾಗ, 'ಹೌ ಡೇರ್ ಟು ಟಚ್ ಮೈ ಥಿಂಗ್ಸ್!' ಎಂದರಚಿ, ಮೈಕ್ರೋಸ್ಕೋಪ್‌ನಡಿ ಹಿಡಿದರೂ ಕಾಣದಂತಹ ಸಣ್ಣ ಮೈಕ್ರಾಣುಗಳಿಗೆಲ್ಲಾ ರಪರಪ ಕೆರೆದುಕೊಂಡು ಸುಜಾತಾ ಯೂನಿಕಾರ್ನ್‌ನಂತೆ ವೇಷ ತಳೆದು ನೆಗೆದೂ ನೆಗೆದೂ ಹಾರಿ ಕಚಪಚ ಕಿತ್ತಾಡಿ ಈಗ ಮನೆ ಬಿಟ್ಟು ಹೋಗಿದ್ದು ಯಾಕೆ ಅನ್ನುವುದು ಅವನಿಗೆ ಸುತರಾಂ ಅರ್ಥವಾಗಲಿಲ್ಲ.

ಸುಮ್ಮನೆ ಚಾನಲ್ ತಿರುಗಿಸುತ್ತಾ ಹೋದ. ಒಂದು ಚಾನಲ್‌ನಲ್ಲಿ ಹೃತಿಕ್ ರೋಷನ್ ಮತ್ತೊಂದು ಚಾನಲ್‌ನಲ್ಲಿ ಕಂಗನಾ ರಣಾವತ್ ಕುಳಿತಿದ್ದರು. ಈ ಚಾನಲ್ಲಿನ ಇವನ ಪ್ರಶ್ನೆಗೆ ಆ ಚಾನಲ್ಲಿನಲ್ಲಿ ಅವಳ ಉತ್ತರ, ಆ ಚಾನಲ್ಲಿನಲ್ಲಿನ ಅವಳ ಪ್ರಶ್ನೆಗೆ ಈ ಚಾನಲ್ಲಿನಲ್ಲಿ ಇವನ ಉತ್ತರ